(*d*) Details regarding the repair works of the breached tanks are furnished in Statement IV placed on the Table of the House.*

Calling Attention to matters of urgent Public Importance.—

(i) re: hardship caused to the weavers in Tiptur Taluk due to non-supply of yarn to them.

Sri T. M. MANJUNATH (Tiptur).— Madam Speaker, I beg to call the attention of the Minister for Industries to the hardship caused to the weavers in Tiptur Taluk due to non-supply of yarn to them.

Sri S. M. KRISHNA (Minister for Industries).— I state as follows :—

Since about a year, there has been countrywide shortage of yarn, particularly in the form of hanks required by the handloom weavers. The position became more difficult after introduction of power cut, since yarn production in Tamil Nadu, which is a major producer of yarn, went down sharply. In March this year, Government of India have introduced complete control on the distribution of yarn. In Mysore State, the Mysore Small Industries Corporation is acting as the main agent for purchase of yarn from the mills. A number of primary retail agents have been entrusted with the distribution of yarn to weavers. In Tiptur Taluk, M/s Sri Jayalaxmi Cotton Powerloom Weavers Co-operative Society, Halepalya, has been selected as one such agent. The following quantities of yarn have been allotted for distribution through the Society :

---

*Copy placed in the Mysore Legislature Library *Vide* No. 39 / D. 16-5-1973.

20s	...	2,874 Kgs.
26s	...	2,715 Kgs.
32s	...	724 Kgs.
28s	...	724 Kgs.

part of the yarn has already been moved by the Society from the main depot at Bangalore. More allotments will follow.

2. Simultaneously, census of handlooms and powerlooms and issue of identity cards has been taken up. Pending issue of cards, the retail agents have been authorised to sell yarn at the rate of 5 kgs. per handloom and 10 kgs. per powerloom. This has been done on an *adhoc* basic and further supplies will be regulated according to the total quantum of allocations to the State. It is expected that with the lifting or relaxation of power cut after the on set of monsoon, there will be improvement in the situation.

ಶ್ರೀ ಟಿ. ಎಂ. ಮಂಜುನಾಥ.— ನಾನು ತಮ್ಮ ಗಮನಕ್ಕೆ ಈ ವಿಚಾರವನ್ನು ತಂದಾಗ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ, ಅದಕ್ಕೆ ನನ್ನ ಅಭಿನಂದನೆಗಳು. ಇದರ ಜೊತೆಗೆ ಈ ಮೂರು ಗ್ರಾಮಗಳಲ್ಲಿ ಹಳೇಪಾಳ್ಯ, ಕೊಟ್ಟನಾಯಕನ ಹಳ್ಳಿ ಮತ್ತು ಇಂಡಸಕೆರೆ, ಅಲ್ಲಿರತಕ್ಕ ನೇಕಾರರು ಕೇವಲ ಇದರಿಂದಲೇ ಜೀವನ ಮಾಡತಕ್ಕವರು. ಅದಕ್ಕೋಸ್ಕರ ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, ತಾವು ಈಗ ಏನು ನೂಲನ್ನು ಕೊಡುತ್ತಿದ್ದೀರಿ ಅದು ಸಾಲದು ಮತ್ತು ಅದನ್ನು ವಿತರಣೆ ಮಾಡತಕ್ಕಂಥ ಸಂದರ್ಭದಲ್ಲಿ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವವರಿಗೆ ಮಾತ್ರ ಕೊಟ್ಟರೆ ಸಾಲದು, ಸದಸ್ಯರಲ್ಲದವರಿಗೂ ನೂಲನ್ನು ಹಂಚುವ ವ್ಯವಸ್ಥೆಯನ್ನು ಮಾಡಬೇಕು. ತಾಲ್ಲೂಕಿನಲ್ಲಿ; ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ ಇದ್ದಾರೆ, ಅವರು ತಾವು ಒಂದು ಆದೇಶ ಕೊಟ್ಟರೆ, ಅಲ್ಲಿಗೆ ಹೋಗಿ ನಿಜವಾಗಿಯೂ ನೇಕಾರರು ಯಾರು. ಎಷ್ಟರ ಮಟ್ಟಿಗೆ ನೂಲು ಬೇಕಾಗುತ್ತದೆ ಎನ್ನುವುದು ತಿಳಿಯುತ್ತಾರೆ. ನನಗೆ ತಿಳಿದಮಟ್ಟಿಗೆ ಒಂದು ವಾರಕ್ಕೆ ೨೦ ಕಟ್ಟು ನೂಲು ಬೇಕಾಗುತ್ತದೆ. ತಾವು ಕೊಡತಕ್ಕ ಕ್ವಾಂಟಿಟಿ ಬಹಳ ಕಡಿಮೆ. ನಿಜವಾಗಿಯೂ ಅವರು ಈ ದಿವಸ ಉಪವಾಸವಿದ್ದಾರೆ. ಇದ್ದರಿಂದ ದೊಡ್ಡ ಮನಸ್ಸು ಮಾಡಿ ತಾವುಗಳು ಅವರಿಗೆ ಒಂದು ತಿಂಗಳಲ್ಲಿ ೧೫ ದಿವಸಕ್ಕಾಗುವಷ್ಟು ನೂಲನ್ನು ವಿತರಣೆ ಮಾಡಿದರೆ ಅವರ ಸಂಸಾರಗಳನ್ನು ಕಾಪಾಡಿದಂತಾಗುತ್ತದೆ ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.— ಮಾನ್ಯ ಸದಸ್ಯರ ಕಳಕಳಿಯನ್ನು ಸರ್ಕಾರದವರು ಅರ್ಥ ಮಾಡಿಕೊಳ್ಳಬಲ್ಲರು. ಇದರಲ್ಲಿ ನಾವು ದೊಡ್ಡ ಮನಸ್ಸು ಮಾಡತಕ್ಕ ಪ್ರಶ್ನೆ ಉಪ್ಪೆನಿಸುವುದಿಲ್ಲ. ನಮ್ಮ ದೇಶದಲ್ಲಿ ನೂಲಿನ ಕೊರತೆ ಇರತಕ್ಕದ್ದು ತಮಗೆ ಗೊತ್ತಿದೆ. ಈ ದೃಷ್ಟಿಯಿಂದ ನಾವು ಎಷ್ಟು ದೊಡ್ಡ ಮನಸ್ಸು ಮಾಡಿದರೂ ಕೂಡ ಅದೇ ಪ್ರಮಾಣದಲ್ಲಿ ನೂಲಿನ ಉತ್ಪಾದನೆ ದೊಡ್ಡದು ಆದರೆ ಈ ತಮ್ಮ ಬೇಡಿಕೆಯನ್ನು ಈಡೇರಿಸುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಅನುಸರಿಸತಕ್ಕ ನೀತಿ ಏನೆಂದರೆ, ಬರತಕ್ಕ ನೂಲನ್ನು ಇಕ್ವಿಟಬಲ್ ಆಗಿ, ಸಮನಾಗಿ ನೇಕಾರರು ಎಲ್ಲೆಲ್ಲಿ ಕೇಂದ್ರೀಕೃತವಾಗಿದ್ದಾರೆ ಆ ಕೇಂದ್ರಗಳಲ್ಲಿ ನೂಲನ್ನು ವಿತರಣ ಮಾಡಬೇಕು ಎನ್ನುವ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ನೂಲನ್ನು ವಿತರಣೆ ಮಾಡುವ ವ್ಯವಸ್ಥೆಯನ್ನು ತಮ್ಮ ಹಸ್ತಕ್ಕೆ ತೆಗೆದುಕೊಂಡಿದ್ದಾರೆ. ಮೈಸೂರಿನಲ್ಲಿ ವೆಲ್-ನಿಟ್ ಕೋ-ಆಪರೇಟೀವ್ ವೀವಿಂಗ್ ಸೊಸೈಟಿ ಇಲ್ಲ ಎನ್ನುವುದು ಮಾನ್ಯ ಸದಸ್ಯರು ಒಪ್ಪತಕ್ಕ ವಿಚಾರ. In the absence of that ಬೇರೆ ಯಾವುದಾದರೂ ವ್ಯವಸ್ಥೆಯನ್ನು ಮಾಡ ಬೇಕಾದರೆ ಅದಕ್ಕೆ ಸಾಕಷ್ಟು ಕಾಲ ಬೇಕಾಗುತ್ತದೆ. ಇನ್ನೊಂದು ಇನ್ಸ್ಟ್ರುಮೆಂಟ್ ಅನ್ನು ಸೃಷ್ಟಿಮಾಡಬೇಕಾಗುತ್ತದೆ. ಆದ್ದರಿಂದ ಯಾವ ಯಾವ ಸೊಸೈಟಿಗಳನ್ನು ನಮ್ಮ ರಿಜಿಸ್ಟ್ರಾರ್ ಮತ್ತು ಡೆವ್ಲಪ್ಮೆಂಟ್ ರಿಜಿಸ್ಟ್ರಾರ್ ಅವರು ಶಿಫಾರಸು ಮಾಡಿರುತ್ತಾರೆ ಅಂಥ ಸೊಸೈಟಿಗಳು ಫಿನಾನ್ಸಿಯಲ್ ಸೌಂಡ್ ಆಗಿವೆಯೇ ಎಂದು ನೋಡಿ ಸರ್ವೆ ಮಾಡಿದರೆ ಅವುಗಳಿಗೆ ಈ ಕಾರ್ಯ ನಿರ್ವಹಣೆ ವಹಿಸಿಕೊಟ್ಟರೆ ಒಳ್ಳೆಯದು ಎಂದು ಅಂಥ ೧೭೬ ಏಜೆಂಟುಗಳನ್ನು ರಾಜ್ಯದಾದ್ಯಂತ ನಾವು ನೇಮಿಸಿದ್ದೇವೆ. ಆ ಏಜೆಂಟುಗಳಲ್ಲಿ ಕೆಲವರಿಗೆ ಹಣದ ತೊಂದರೆ ಇರುವುದರಿಂದ ಅವರು ನೂಲನ್ನು ಕೊಂಡುಕೊಳ್ಳಬೇಕಾದರೆ, ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ವರ ಹಣಕಾಸಿನ ಅಡ್ಡಿ ಆಡಚಣೆಗಳು ಇವೆ. ಆದ್ದರಿಂದ ಅಲ್ಲಿ ಹಣಕಾಸಿನ ಕೊರತೆ ಇದೆ. ಬೇರೆ ಒಂದು ಅಲ್ಟರ್ನೇಟಿವ್ ಅರೇಂಜ್‌ಮೆಂಟ್ ಮಾಡಬೇಕು ಎನ್ನುವ ಬಗ್ಗೆ ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈಗ ಮಳೆಯು ಪ್ರಾರಂಭವಾಗಿ ಮುಖ್ಯವಾಗಿ ತಮಿಳುನಾಡಿನಲ್ಲಿ ಪವರ್ ಕಟ್ ಏನು ಇದೆ ಅದನ್ನು ಸುಧಾರಣೆಮಾಡಿದ ಮರುದಿವಸವೇ ಈ ನೂಲಿನ ಹಾಹಾಕಾರ ಏನು ಇದೆ ಅದು ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ ಎಂದು ಸರ್ಕಾರದ ಅಭಿಪ್ರಾಯ ಇದೆ.

(ii) Re: Death of Goats and Sheep in Humnabad and Bidar Taluks due to some disease.

Sri V. N. PATIL (Humnabad).—Madam Speaker, I call the attention of the Hon. Minister for Animal Husbandry in connection with the mortality of sheeps and goats at Humnabad and Bidar taluks.